ಈ ದಿನ ದಿನಾಂಕಃ 22-10-2024 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀಸವಾಲು ವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ**

ವಾದಿ ಸಲ್ಲಿಸಿರುವ ದಾವೆಯ ಬಗ್ಗೆ ನನಗೆ ತಿಳುವಳಿಕೆ ಇರುತ್ತದೆ. ಸರ್ವೆ ನಂಃ 9 ರಲ್ಲಿ ನನಗೆ ಸೇರಿದ ಯಾವುದೇ  ಆಸ್ತಿ ಇರುವುದಿಲ ಎಂದರೆ ಸರಿ . ಸರ್ವೆ ನಂಃ 9/1 ರ 3 ಎಕರೆ 13 ಗುಂಟೆ ಜಮೀನಿಗೆ ವಾದಿಯೇ ಮಾಲೀಕರು ಎಂದರೆ ಸರಿ . ಸರ್ವೆ ನಂಃ 9/1 ರಲ್ಲಿ ರುವ ಜಮೀನು  ನನಗೂ ಹಾಗೂ 2 ರಿಂದ 4ನೇ ಪ್ರತಿವಾದಿಗಳಿಗೆ ಸೇರಿರುವುದಿಲ್ಲ ಎಂದರೆ ಸರಿ . ವಾದಿಯು ದಾವೆಯನ್ನು ಸರ್ವೆ ನಂಃ 9/1 ರ 3 ಎಕರೆ 13 ಗುಂಟೆ ಜಮೀನಿಗೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ . ವಾದ ಪತ್ರದಲ್ಲಿ ನಮೂದಿಸಿರುವ ಎ ಯಿಂದ ಇ ಷೆಡ್ಯೂಲ್ ನಲ್ಲಿರುವ ಆಸ್ತಿಗಳ ವಿಚಾರವನ್ನು ವಕೀಲರಿಂದ ತಿಳಿದುಕೊಂಡಿರುವುದಿಲ್ಲ. ಬಿ ಯಿಂದ ಇ ವರೆಗಿನ ಷೆಡ್ಯೂಲ್ ಗಳು ಸ್ವತ್ತುಗಳು ಎ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟವು ಅಥವಾ ಒಳಪಟ್ಟಿರುತ್ತವೆ ಎಂದರೆ ಸರಿ .

2. ವಾದಿ ದಾವೆಯನ್ನು ಸಲ್ಲಿಸುವ ಮೊದಲು ನನಗೂ ಹಾಗೂ ಇತರೆ ಪ್ರತಿವಾದಿಗಳಿಗೂ ಹಾಗೂ ಪಾಲುದಾರರಿಗೂ ನೋಟೀಸ್ ಕಳುಹಿಸಿರುತ್ತಾರೆ ಎಂದರೆ ಸರಿ . ದಿನಾಂಕಃ 19-11-2019 ರಂದು ಸರ್ವೇ ಸೂಪರ್ ವೈಸರ್ ಹದ್ದು ಬಸ್ತು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 17-06-2019 ರಂದು ದುರಸ್ಥಿ ಕಾರ್ಯವನ್ನು ಮಾಡಲು ಎ ಡಿ ಎಲ್ ಆರ್ ಕಚೇರಿಯಿಂದ ಪೊಲೀಸ್ ಸಂರಕ್ಷಣೆಯಲ್ಲಿ ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ಸರಿ . ಎ ಡಿ ಎಲ್ ಆರ್ ಸಮಕ್ಷಮದಲ್ಲಿ ಅಳತೆ ಆಗಿರುತ್ತದೆ ಎಂದರೆ ಸರಿ . ಸರ್ವೆ ನಂಃ 9/1 ರ 3 ಎಕರೆ 13 ಗುಂಟೆ ಜಮೀನನ್ನು ಸರ್ವೇಯರ್ ಅಳತೆ ಮಾಡಿ ನಾನು ಹಾಗೂ 2 ರಿಂದ 4 ನೇ ಪ್ರತಿವಾದಿಗಳು ಎಷ್ಟು ವಿಸ್ತೀರ್ಣ ಒತ್ತುವರಿ ಮಾಡಿರುತ್ತೇವೆ ಎಂದು ನಮೂದಿಸಿರುತ್ತಾರೆ ಎಂದರೆ ಸರಿ .  ಸರ್ವೆ ನಂಃ 9/1 ರ 16 ಗುಂಟೆ ಜಮೀನನ್ನು ಸರ್ವೆ ನಂಃ 19/3 ರ ಮಾಲೀಕನಾದ ನಾನು ನನ್ನ ಜಮೀನಿಗೆ ಒತ್ತುವರಿ ಮಾಡಿಕೊಂಡಿರುತ್ತೇನೆ ಎಂದರೆ

ಸರಿಯಲ್ಲ. 2ನೇ ಪ್ರತಿವಾದಿಯು 10 ಗುಂಟೆ ಜಮೀನಿನಷ್ಟು ಸರ್ವೆ ನಂಃ 9/1 ರಲ್ಲಿ ಒತ್ತುವರಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿಯ ಮಾಲೀಕತ್ವದ ಸರ್ವೆ ನಂಃ 9/7 ಎಂದರೆ ಸರಿ . 3ನೇ ಪ್ರತಿವಾದಿ ಸರ್ವೆ ನಂಃ 9/1 ರಲ್ಲಿ 1 ¾ ಗುಂಟೆ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 3ನೇ ಪ್ರತಿವಾದಿಯ ಮಾಲೀಕತ್ವದ ಸರ್ವೆ ನಂಃ 9/5 ಎಂದರೆ ಸರಿ . 4ನೇ ಪ್ರತಿವಾದಿ ಸರ್ವೆ ನಂಃ 9/1 ರಲ್ಲಿ 25 ಗುಂಟೆ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 4ನೇ ಪ್ರತಿವಾದಿಯ ಮಾಲೀಕತ್ವದ ಸರ್ವೆ ನಂಃ 10/9 ಎಂದರೆ ಸರಿ . ದಿಃ 19-11-2019 ರಂದು ಸರ್ವೆ ಸೂಪರ್ ವೈಸರ್ ಸರ್ವೆ ನಂಃ 9/1 ರ 3 ಎಕರೆ 13 ಗುಂಟೆ ಜಮೀನನ್ನು ಅಳತೆ ಮಾಡಿ ಸ್ಕೆಚ್ , ಮಹಜರ್ ಹಾಗೂ ವರದಿಯನ್ನು ತಯಾರಿಸಿದ್ದು , ಸದರಿ ದಾಖಲೆಗಳಿಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆಯರ್ ಗೆ ನಾನು ಸಹಿ ಮಾಡದಿರುಲು ಯಾವುದೇ ಕಾರಣವನ್ನು ಹೇಳಿ ಬರೆಯಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಾನು ದಾಖಲೆಗಳಿಗೆ ಸಹಿ ಮಾಡಿರುತ್ತೇನೊ ಅಥವ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಒತ್ತುವರಿಯಾದ ಜಮೀನನ್ನು ನಾನು ಹಾಗೂ 2 ರಿಂದ 4 ನೇ ಪ್ರತಿವಾದಿಗಳೂ ಬಿಟ್ಟುಕೊಡುತ್ತೆವೆಂದು ವಾದಿಗೆ ಹೇಳಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಮಾತಿನಂತೆ ವಾದಿಗೆ ಒತ್ತುವರಿಯಾದ ಜಮೀನನ್ನು ಬಿಟ್ಟುಕೊಡದ ಕಾರಣ ದಿಃ 30-06-2020 ರಂದು ವಾದಿ ಬಸವಾಪಟ್ಟಣ ಪೊ ಠಾಣೆಯಲ್ಲಿ ದೂರು ಸಲ್ಲಿಸಿರುತ್ತಾರೆ ಎಂದರೆ ಸರಿ. ತದನಂತರ ಪೊಲೀಸರು ಒತ್ತುವರಿಯಾದ ಸ್ಥಳವನ್ನು ಬಿಟ್ಟುಕೊಡುವಂತೆ ಸೂಚಿಸಿರುತ್ತಾರೆ ಎಂದರೆ ಸರಿ .

ವಾದಿಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

Sd/-

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.